# ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಪ್ರಶಸ್ತಿ ಪುರಸ್ಕೃತ ಅಧ್ಯಾಪಕರಿಗೆ ಸನ್ಮಾನ ಕಾರ್ಯಕ್ರಮ–2023

**ಕಾರ್ಯಕ್ರಮ–28.3.2023**

## ಪ್ರಶಸ್ತಿಗಳು ನಮ್ಮ ಆತ್ಮವಿಶ್ವಾಸ ಹೆಚ್ಚಿಸುತ್ತವೆ : ಡಾ. ಡಿ ವಿ ಪರಮಶಿವಮೂರ್ತಿ

ಪ್ರಶಸ್ತಿ ಮತ್ತು ಪುರಸ್ಕಾರಗಳು ನಮ್ಮ ಕ್ಷೇತ್ರಗಳಲ್ಲಿ ಇನ್ನು ಹೆಚ್ಚಿನ ಕೆಲಸ ಮಾಡಲು ಹುರುಪು ತುಂಬುತ್ತವೆ. ನಮ್ಮಲ್ಲಿ ಆತ್ಮವಿಶ್ವಾಸ ಮತ್ತು ಹೊಸ ಚೈತನ್ಯ ತುಂಬುತ್ತವೆ ಎಂದು ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ **ಡಾ. ಡಿ. ವಿ. ಪರಮಶಿವಮೂರ್ತಿ ಅವರು** ಹೇಳಿದರು.



ಕನ್ನಡ ವಿಶ್ವವಿದ್ಯಾಲಯದ ಭುವನ ವಿಜಯ ಸಭಾಂಗಣದಲ್ಲಿ ದಿನಾಂಕ 28.3.2023ರಂದು ಹಮ್ಮಿಕೊಂಡಿದ್ದ **ಪ್ರಶಸ್ತಿ ಪುರಸ್ಕೃತ ಅಧ್ಯಾಪಕರಿಗೆ ಸನ್ಮಾನ ಕಾರ್ಯಕ್ರಮ**ದ ಅಧ್ಯಕ್ಷತೆ ವಹಿಸಿ ಮಾತನಾಡುತ್ತ, ನಮ್ಮ ವಿಶ್ವವಿದ್ಯಾಲಯದ ಅಧ್ಯಾಪಕರು ಶ್ರಮ ಪೂರಕವಾಗಿ ಪ್ರಶಸ್ತಿ ಪಡೆದಿರುವುದು ನಮಗೆ ಹೆಮ್ಮೆಯ ಸಂಗತಿ. ವಿಶ್ವವಿದ್ಯಾಲಯದ ಅಧ್ಯಾಪಕರು ವಿವಿಧ ಕ್ಷೇತ್ರಗಳ ಸಂಶೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದು, ಸಮಾಜಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ನಮ್ಮ ವಿಶ್ವವಿದ್ಯಾಲಯದ ಬೋಧಕೇತರ ಸಿಬ್ಬಂದಿ ಹುಸೇನ್ ಅವರಿಗೆ ಕರ್ನಾಟಕ ಸರಕಾರದಿಂದ ಜಕಣಾಚಾರಿ ಪ್ರಶಸ್ತಿ ದೊರಕಿದ್ದು, ಮುಂದಿನ ದಿನಗಳಲ್ಲಿ ಅವರಿಗೂ ಕೂಡ ಸನ್ಮಾನ ಹಮ್ಮಿಕೊಳ್ಳಲಾಗುವುದು ಎಂದರು.

ಕನ್ನಡ ವಿಶ್ವವಿದ್ಯಾಲಯದ ಕುಲಸಚಿವರಾದ **ಡಾ.ಎ. ಸುಬ್ಬಣ್ಣ ರೈ ಅವರು** ಕಾರ್ಯಕ್ರಮವನ್ನು ಕುರಿತು ಮಾತನಾಡುತ್ತ, ವಿಶ್ವವಿದ್ಯಾಲಯದಲ್ಲಿ ಕೇವಲ ಅಧ್ಯಯನ ಅಲ್ಲದೇ, ವಿವಿಧ ಕ್ಷೇತ್ರಗಳಲ್ಲಿ ಉತ್ತಮ ಕಾರ್ಯನಿರ್ವಹಿಸಿದ್ದಾರೆ. ಇದನ್ನು ಗುರುತಿಸಿ ಸರ್ಕಾರ ಮತ್ತು ಸಮಾಜದ ವಿವಿಧ ಸಂಘ ಸಂಸ್ಥೆಗಳು ಪ್ರಶಸ್ತಿ–ಪುರಸ್ಕಾರಗಳನ್ನು ನೀಡಿ ಗೌರವಿಸಿವೆ. ಇಂತಹ ಸಾಧಕರನ್ನು ವಿಶ್ವವಿದ್ಯಾಲಯ ಸನ್ಮಾನಿಸುವುದು ಅಗತ್ಯವಾಗಿದೆ. ಮುಂದಿನ ದಿನಗಳಲ್ಲಿ ಈ ರೀತಿಯ ಕಾರ್ಯಕ್ರಮಗಳು ನಿರಂತರವಾಗಿ ನಡೆಯಲಿವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರಾದ **ಡಾ. ಚಲುವರಾಜು, ಡಾ. ಎಫ್.ಟಿ. ಹಳ್ಳಿಕೇರಿ, ಡಾ. ಕೆ.ಎಂ. ಮೇತ್ರಿ, ಡಾ. ಎ. ಮೋಹನ್ ಕುಂಟಾರ್, ಡಾ. ಕೆ. ರವೀಂದ್ರನಾಥ, ಡಾ. ಅಮರೇಶ ಯತಗಲ್** ಇವರುಗಳಿಗೆ ಕನ್ನಡ ವಿಶ್ವವಿದ್ಯಾಲಯದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ **ಡಾ.** ಸಿ. **ವೆಂಕಟೇಶ ಅವರು** ಪ್ರಶಸ್ತಿ ಪುರಸ್ಕೃರ ಕುರಿತು ಮಾತನಾಡಿದರು.

ಕಾರ್ಯಕ್ರಮದಲ್ಲಿ ಕನ್ನಡ ವಿಶ್ವವಿದ್ಯಾಲಯದ ವಿವಿಧ ನಿಕಾಯದ **ಡೀನರು, ಪ್ರಾಧ್ಯಾಪಕರು, ಸಂಶೋಧನಾರ್ಥಿಗಳು, ವಿದ್ಯಾರ್ಥಿಗಳು** ಮತ್ತು **ಬೋಧಕೇತರ ಸಿಬ್ಬಂದಿಗಳು** ಉಪಸ್ಥಿತರಿದ್ದರು.




ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ.ಡಿ.ವಿಪರಮಶಿವಮೂರ್ತಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು



# ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

## ಪ್ರಶಸ್ತಿ ಪುರಸ್ಕೃತ ಅಧ್ಯಾಪಕರಿಗೆ ಸನ್ಮಾನ ಕಾರ್ಯಕ್ರಮ-೨೦೨೩

ಅಧ್ಯಕ್ಷತೆ : **ಡಾ. ಡಿ.ವಿ. ಪರಮಶಿವಮೂರ್ತಿ** ಮಾನ್ಯ ಕುಲಪತಿಗಳು

ಪ್ರಸ್ತಾವನೆ : **ಡಾ. ಎ. ಸುಬ್ಬಣ್ಣ ರೈ** ಕುಲಸಚಿವರು

ಸ್ವಾಗತ : **ಡಾ. ಎ. ವೆಂಕಟೇಶ** ಉಪಕುಲಸಚಿವರು (ಆಡಳಿತ)

ಸನ್ಮಾನ : **ಡಾ. ಎಫ್.ಟಿ. ಹಳ್ಳಿಕೇರಿ** ಪ್ರಾಧ್ಯಾಪಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನಕಸಿರಿ ಪ್ರಶಸ್ತಿ ಹಾಗೂ ಮಾರ್ಗಸಿರಿ ಪ್ರಶಸ್ತಿ

**ಡಾ. ಚಲುವರಾಜು** ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ
ಹಕ್ಕಬುಕ್ಕ ಪ್ರಶಸ್ತಿ, ಶರಣ ಉರಿಲಿಂಗ ಪೆದ್ದಿ ಪ್ರಶಸ್ತಿ ಹಾಗೂ ಜಾನಪದ ಪ್ರಪಂಚ ಪ್ರಶಸ್ತಿ

**ಪ್ರೊ. ಕೆ.ಎಂ. ಮೇತ್ರಿ** ಪ್ರಾಧ್ಯಾಪಕರು, ಬುಡಕಟ್ಟು ಅಧ್ಯಯನ ವಿಭಾಗ
ಅತ್ಯುತ್ತಮ ಸೇವೆ ಪ್ರಶಸ್ತಿ ಹಾಗೂ ಕುಮುದ ಸುಶೀಲಪ್ಪ ದತ್ತಿ ಪುರಸ್ಕಾರ

**ಡಾ. ಎ. ಮೋಹನ ಕುಂಟಾರ್** ಪ್ರಾಧ್ಯಾಪಕರು, ಭಾಷಾಂತರ ಅಧ್ಯಯನ ವಿಭಾಗ
ಕುವೆಂಪು ಭಾಷಭಾರತಿ ಪ್ರಾಧಿಕಾರ ಪುಸ್ತಕ ಪ್ರಶಸ್ತಿ ಹಾಗೂ ಕರ್ನಾಟಕ ಸಂಘ
ಶಿವಮೊಗ್ಗ ಪುಸ್ತಕ ಪ್ರಶಸ್ತಿ

**ಡಾ. ಎನ್. ಚಿನ್ನಸ್ವಾಮಿ ಸೋಸಲೆ** ಪ್ರಾಧ್ಯಾಪಕರು, ಚರಿತ್ರೆ ವಿಭಾಗ
ಡಾ. ರಾಗೌ ಸಾಹಿತ್ಯ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನ ಪ್ರಶಸ್ತಿ

**ಡಾ. ಕೆ. ರವೀಂದ್ರನಾಥ** ಪ್ರಾಧ್ಯಾಪಕರು, ಹಸ್ತಪ್ರತಿ ವಿಭಾಗ
ಸಂಶೋಧನಾ ಶ್ರೀ ಪ್ರಶಸ್ತಿ ಹಾಗೂ ಶ್ರೀಮತಿ ಜಯಲಕ್ಷ್ಮಮ್ಮ ಬಿ.ಎಸ್.
ಸಣ್ಣಯ್ಯ ದತ್ತಿ ಪ್ರಶಸ್ತಿ

**ಡಾ. ಅಮರೇಶ ಯತಗಲ್** ಸಹ ಪ್ರಾಧ್ಯಾಪಕರು, ಶಾಸನಶಾಸ್ತ್ರ ವಿಭಾಗ
ರಾಜ್ಯಮಟ್ಟದ ಶ್ರೀ ಸಿದ್ಧ ಸಾಹಿತ್ಯ ಪುರಸ್ಕಾರ ಹಾಗೂ
ರಾಜ್ಯಮಟ್ಟದ ಎಚ್.ಎನ್. ಪ್ರಶಸ್ತಿ

ಪ್ರಶಸ್ತಿ ಪುರಸ್ಕೃತರ ಕುರಿತು : **ಶ್ರೀ ಸಿ. ವೆಂಕಟೇಶ** ಸಹ ಪ್ರಾಧ್ಯಾಪಕರು, ದ್ರಾವಿಡ ಸಂಸ್ಕೃತಿ ಅಧ್ಯಯನ ವಿಭಾಗ

ವಂದನಾರ್ಪಣೆ : **ಡಾ. ಯರ್ರಿಸ್ವಾಮಿ ಈ.** ಸಹಾಯಕ ಪ್ರಾಧ್ಯಾಪಕರು, ಮಹಿಳಾ ಅಧ್ಯಯನ ವಿಭಾಗ

ದಿನಾಂಕ : ೨೮.೦೩.೨೦೨೩ ಬೆಳಿಗ್ಗೆ ೧೧ ಗಂಟೆಗೆ
ಸ್ಥಳ : ಭುವನವಿಜಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಎಲ್ಲರಿಗೂ ಸ್ವಾಗತ**

**ಡಾ. ಎ. ಸುಬ್ಬಣ್ಣ ರೈ**
ಕುಲಸಚಿವರು

**ಡಾ. ಜನಾರ್ದನ**
ಸಮನ್ವಯಾಧಿಕಾರಿಗಳು (ಶೈಕ್ಷಣಿಕ)